**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.33/2023**

ಪ್ರಾ.ಸಾ. 5

ಚಾ.ಸಾ. 10

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.04.2026**

ಸಾಕ್ಷಿದಾರರ ಹೆಸರು ನವೀನ್ ಕುಮಾರ್

ತಂದೆಯ ಹೆಸರು ಸಿ.ಜೆ.ಈರೇಗೌಡ

ವಯಸ್ಸು 40 ವರ್ಷ

ಉದ್ಯೋಗ ವ್ಯವಸಾಯ

ವಾಸ ಚೀಣ್ಯ, ನಾಗಮಂಗಲ ತಾಲ್ಲೂಕು

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು ಈಗ ನೋಡುತ್ತಿರುವ ನಿಪಿ.2 ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 5-6 ವರ್ಷಗಳ ಹಿಂದೆ ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಯಾಕೆ ಪೊಲೀಸರು ಸಹಿ ಪಡೆದಿದ್ದಾರೆಂದು ಹೇಳಿಲ್ಲ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ ಸ್ಥಳದಲ್ಲಿ ಟ್ರ್ಯಾಕ್ಟರ್ ಇಂಜೀನ್ ನೋಡಿಲ್ಲ. ನಿಪಿ.3 ಮತ್ತು ನಿಪಿ.4 ರಲ್ಲಿ ಕಾಣುತ್ತಿರುವ ಟ್ರ್ಯಾಕ್ಟರ್ ನಾನು ನೋಡಿಲ್ಲ. ಪೊಲೀಸರು ನನ್ನ ಸಮಕ್ಷಮ ಟ್ರ್ಯಾಕ್ಟರ್ ಇಂಜೀನ್ ಅಮಾನತ್ತುಪಡಿಸಿಕೊಂಡಿಲ್ಲ. ಸಹಿ ಮಾಡುವಾಗ ಬೆಳಗ್ಗೆ 11.00 ರಿಂದ 11.30 ಗಂಟೆ ಆಗಿತ್ತು. ನನ್ನ ಜೊತೆ ಬೇರೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು

ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ದಿನಾಂಕ 15.11.2020 ರಂದು ಚಾಸಾ.1 ರವರ ಮನೆಯ ಬಳಿ ಬಂದು ಕೃತ್ಯ ನಡೆದ ಸ್ಥಳದಲ್ಲಿ ಚಾಸಾ.1 ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪೊಲೀಸರು ಪರಿಶೀಲಿಸಿ ಆ ಕಾಲಕ್ಕೆ ನಿಪಿ.3 ಮತ್ತು ನಿಪಿ.4 ರಲ್ಲಿ ಕಾಣುವ ಟ್ರ್ಯಾಕ್ಟರ್ ಇಂಜೀನ್‌ನ್ನು ಚಾಸಾ.1 ಪೊಲೀಸರಿಗೆ ತೋರಿಸಿದಾಗ, ಪೊಲೀಸರು ನಿಪಿ–2 ರಂತೆ ಬೆಳಿಗ್ಗೆ 9.00 ರಿಂದ 10.00 ಗಂಟೆವರೆಗೆ ಮಹಜರ್ ಮಾಡಿದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ.9 ರವರು ಹಾಜರಿದ್ದು, ಮಹಜರಿಗೆ ನನ್ನ ಜೊತೆ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಪೊಲೀಸರು ಆ ದಿನ ನನ್ನ ಸಮಕ್ಷಮ ನಿಪಿ.2 ರಂತೆ ಮಹಜರು ಮಾಡಿ, ನಿಪಿ.3 ಮತ್ತು ನಿಪಿ.4 ರಲ್ಲಿ ಕಾಣುವ ಟ್ರ್ಯಾಕ್ಟರ್ ಅನ್ನು ಅಮಾನತ್ತುಪಡಿಸಿ, ಸ್ಥಳದಲ್ಲಿಯೇ ಮಹಜರು ಮಾಡಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಚಾಸಾ.1 ನನ್ನ ಊರಿನವರಾದ ಕಾರಣ ಅವರ ಮಾತುಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ರವರು ಆಗ ಆರೋಪಿ ಟ್ರ್ಯಾಕ್ಟರ್ ಅನ್ನು ಅಜಾಗರೂಕತೆಯಿಂದ ನಿಲ್ಲಿಸಿ, ಕೆಂಪಮ್ಮನ ಸಾವಿಗೆ ಕಾರಣವಾದ ಜಾಗ ಎಂದು ಚಾಸಾ.1 ರವರ ಮನೆಯ ಮುಂಭಾಗದ ಸ್ಥಳ ತೋರಿಸಿದ್ದರ ಮೇರೆಗೆ ನನ್ನ ಸಮಕ್ಷಮ ತನಿಖಾಧಿಕಾರಿಗಳು ಸದರಿ ಪಂಚನಾಮೆ ಮಾಡಿದ್ದಾರೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಡಿಎಂ ಎಂ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.